OS No. 19/2024

PW-1

**(ಇಂದು ದಿಃ 01-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲು ಪ್ರತಿವಾದಿಯರ ಪರ ಃ ಶ್ರೀ SRH ವಕೀಲರಿಂದಃ**

ದಾವಾ ಜಮೀನು ಈಗ ನನ್ನ ಹೆಸರಿನಲ್ಲಿದೆ. ನನ್ನ ಅತ್ತೆ ತೀರಿ ಹೋದ ನಂತರ ದಾವಾ ಜಮೀನು ನನ್ನ ಗಂಡನ ಹೆಸರಿಗೆ ಬಂತು. ನನ್ನ ಗಂಡನಿಂದ ನನಗೆ ಬಂದಿದೆ. ನನ್ನ ಗಂಡನ ಹಿರಿಯರು 52 ಎಕರೆ ಜಮೀನು ಕೊಂಡಿದ್ದರು, ನ್ಯಾಯಾಲಯದ ಆದೇಶದ ಪ್ರಕಾರ ನನ್ನ ಅತ್ತೆಯ ಹೆಸರಿಗೇ 13 ಎಕರೆ 20 ಗುಂಟೆ ಆಗಿತ್ತು. ನಾ್ಯಯಾಲಯದ ಆದೇಶ ಯಾವ ನ್ಯಾಯಾಲಯದಿಂದ ಮತ್ತು ಯಾವ ಪ್ರಕರಣದಲ್ಲಿ ಆಗಿದೆ ಹೇಳಲು ಆಗುವುದಿಲ್ಲ. ಅಸಲು ದಾವಾ ನಂ. 113/2013 ರನ್ನು ರಾಮಲಿಂಗಮ್ಮ ವತ್ತು ಇತರರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ, ಸದರಿ ದಾವೆ ವಜಾ ಆದ ಕಾರಣ ಮಾನ್ಯ ಉಚ್ಚನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ದಾವಾ ಜಮೀನಿಗೆ ಮೂಲ ಮಾಲೀಕರು ಅಡಕಿ ಗ್ರಾಮದ ಪದ್ಮವತಿ ವಾಸುದೇವರಾವ್ ದೇಸಪಾಂಡೇ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ, ಪದ್ಮವತಿ ಸದರಿ ಜಮೀನನ್ನು ನನ್ನ ಗಂಡನ ಹಿರಿಯರಿಗೆ ಗೇಣಿಗೆ ಹಾಕಿದ್ದರು ಎಂದರೆ ಸರಿ. ಪಾರ್ಮ ನಂಬರ 7 ತುಂಬಿದ್ದು ಮತ್ತು ಜಮೀನು ಮಂಜೂರಾಗಿದ್ದು ನನಗೆ ಗೊತ್ತಿಲ್ಲ, ಸದರಿ ಅರ್ಜಿ ವಜಾ ಆಗಿದೆ ಎಂದರೆ ಸರಿಯಲ್ಲ, ಭೂ ನ್ಯಾಯ ಮಂಡಳಿ ಮುಂದೆ 2 ಮತ್ತು 3 ನೇ ಪ್ರತಿವಾದಿಯರು ಹೇಳಿಕೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ರಾಮಲಿಂಗಮ್ಮ ಮತ್ತು ಇತರರು ಜಮೀನನ್ನು ನಾವು ಕೊಂಡುಕೊಂಡಿದ್ದೇವೆ ಎಂದು ಭೂ ನ್ಯಾಯ ಮಂಡಳಿ ಮುಂದೆ ವಾದ ಮಾಡಿದ್ದರು ಆದರೆ ಅದನ್ನು ನ್ಯಾಯಾಲಯ ತೀರಸ್ಕಾರ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಪ್ರತಿವಾದಿಯರು 1975 ರಲ್ಲಿ ಪದ್ಮವತಿರವರಿಂದ ತಲಾ 4 ಎಕರೆ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಅವರು ಜಮೀನನ್ನು ನನ್ನ ಅತ್ತ ಅಥವಾ ಗಂಡನಿಂದ ಖರೀದಿ ಮಾಡಿಲ್ಲ ಎಂದು ಹೇಳುತ್ತಾರೆ.

ರಾಮಲಿಂಗಮ್ಮ ದಾವಾ ಜಮೀನಿನಲ್ಲಿನ ಹಕ್ಕನ್ನು ನನ್ನ ಪರವಾಗಿ ಬಿಟ್ಟು ಕೊಟ್ಟಿದ್ದಾರೆ. ರಾಮಲಿಂಗಮ್ಮ 2ಲಕ್ಷ ಹಣ ಪಡೆದು ನನಗೆ ಬಿಟ್ಟು ಕೊಟ್ಟಿದ್ದಾರೆ . ಸಾಕ್ಷಿ ಮುಂದುವರೆದು ದಾವಾ ಜಮೀನು ಹೊರತುಪಡಿಸಿ 13 ಎಕರೆ 20 ಗುಂಟೆ ರಾಮಲಿಂಗಮ್ಮನ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ. ರಾಮಲಿಂಗಮ್ಮ 2 ಲಕ್ಷ ರೂಪಾಯಿ ಪಡೆದು ನನ್ನ ಪರವಾಗಿ

ನೋಂದಾಯಿತ ದಾಖಲಾತಿ ಮಾಡಿ ಕೊಟ್ಟಿದ್ದಾರೆ . 2 ಲಕ್ಷ ಹಣ ಮನೆಯಲ್ಲಿ ಕೊಟ್ಟಿದ್ದೇವೆ. ಹಣ ಕೊಟ್ಟ ಬಗ್ಗೆ ದಾಖಲಾತಿಯಲ್ಲಿ ಬರೆಸಿದ್ದೇನೆ. ಸಾವೀತ್ರಬಾಯಿ ಮತ್ತು ಶಿವಪ್ಪ ಸಾಕ್ಷಿದಾರರಾಗಿದ್ದರು. ಇಬ್ಬರು ಬದುಕಿದ್ದಾರೆ. ದಾಖಲಾತಿ ಪ್ರಕಾರ ಮುಟೇಷನ್ ಮಾಡುವಂತೆ ಅರ್ಜಿ ಕೊಟ್ಟಿದ್ದೆ. ಕಂದಾಯ ಅಧಿಕಾರಿಗಳು ಪಂಚನಾಮೆ ಮಾಡಿದಾಗ ಯಾರು ಯಾರು ಇದ್ದರು ನನಗೆ ಗೊತ್ತಿಲ್ಲ. ಸರ್ವೇ ನಂ.43 ಮತ್ತು 44 ರಲ್ಲಿ ಒಟ್ಟು 52 ಎಕರೆ ಜಮೀನು ಇತ್ತು. ಭಾಗ ಆಗಿ ಈಗ ನಮ್ಮ ಭಾಗಕ್ಕೆ ದಾವಾ ಜಮೀನು ಬಂದಿದೆ. ಭೂ ನ್ಯಾಯಾಮಂಡಳಿಯಲ್ಲಿಃ ದಿನಾಂಕ 17.10.1987 ರಲ್ಲಿ ಆದೇಶ ಪ್ರಶ್ನೆ ಮಾಡಿ ಅಪೀಲು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಜಮೀನುಗೂ ಮತ್ತು ನಮಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1975 ರಲ್ಲಿ ಪ್ರತಿವಾದಿಯರು ತಲಾ 4 ಎಕರೆ ಖರೀದಿ ಮಾಡಿದ್ದು ಅವರೇ ದಾವಾ ಜಮೀನಿನಲ್ಲಿ ಮಾಲೀಕರಾಗಿ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ಕೋಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**